**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 287/2025**

**ಸಾಕ್ಷಿಯನ್ನು ದಿಃ 08.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ತ್ಯಾಗರಾಜು ಕೆ.ಜೆ | ಸಿಡಬ್ಲ್ಯೂ:12 | ಪಿಡಬ್ಲ್ಯೂ:6 |
| ತಂದೆಯ ಹೆಸರು | ಜವರೇಗೌಡ | | |
| ವಯಸ್ಸು | 32 ವರ್ಷ | | |
| ಕೆಲಸ | ಮೋಟಾರ್ ವಾಹನ ನೀರಿಕ್ಷಕ | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 11.03.2024 ರಿಂದ ಇಲ್ಲಿಯವರೆಗೆ ಹುಣಸೂರು ಆರ್.ಟಿ.ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ22.01.2025 ರಲ್ಲಿ ಬಿಳಿಕೆರೆ ಪೊಲೀಸ್ ಠಾಣೆಯಿಂದ ಮನವಿ ಬಂದಿದ್ದು, ಸದರಿ ಮನವಿಯಲ್ಲಿ ಎರಡು ವಾಹನಗಳ ಮಧ್ಯ ಅಪಘಾತ ಆಗಿರುತ್ತದೆ ಅದನ್ನು ಪರಿಶೀಲಿಸಬೇಕೆಂದು ತಿಳಿಸಿರುತ್ತಾರೆ. ಅದೇ ದಿನ ಬಿಳಿಕೆರೆ ಪೊಲೀಸ್ ಠಾಣೆಗೆ ಭೇಟಿ ನೀಡಿ, ಸದರಿ ಠಾಣೆಯಲ್ಲಿ ವಾಹನ ಸಂಖ್ಯೆ ಕೆಎ 09 ಎಎ 1670 ಅಶೋಕ್ ಲೈ- ಲ್ಯಾಂಡ್ ದೊಸ್ತ ಬಿಳಿ ಬಣ್ಣದ ವಾಹನ ಹಾಗೂ ಕೆಎ 45 ಯು 9521 ಹೀರೊ ಸ್ಪೆಂಡರ್ ಪ್ಲಸ್ ಬೈಕ್ ಕಪ್ಪು ನೀಲಿ ಮತ್ತು ಕೆಂಪು ಬಣ್ಣದ ಬೈಕ್ ಇದ್ದು, ಅವುಗಳನ್ನು ಪರಿಶೀಲಿಸಿರುತ್ತೇನೆ.

ಕೆಎ 09 ಎಎ 1670 ಅಶೋಕ್ ಲೈ ಲ್ಯಾಂಡ್ ದೊಸ್ತ ಬಿಳಿ ಬಣ್ಣದ ವಾಹನ ಪರೀಶಿಲಿಸಿದಾಗ ಯಾವುದೆ ಜಖಂ ಕಂಡು ಬಂದಿರುವುದಿಲ್ಲ.

ಕೆಎ 45 ಯು 9521 ಹೀರೊ ಸ್ಪೆಂಡರ್ ಪ್ಲಸ್ ಬೈಕ್ ಕಪ್ಪು ನೀಲಿ ಮತ್ತು ಕೆಂಪು ಬಣ್ಣದ ಬೈಕ್ ಅನ್ನು ಪರೀಲಿಸಿದಾಗ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತವೆ.

1 ಅದರ ಹೆಡ್ ಲೈಡ್ ಮಾಸ್ಕ್,

2.ಬ್ಯಾಟರಿ ಬಾಕ್ಸ ಕವರ್,

3. ಬಲಭಾಗದ ಮುಂಭಾಗ ಪುಟ್ ರೆಸ್ಟ್

4. ಹಿಂಭಾಗದ ಮಡ್ ಗಾರ್ಡ

5. ಬ್ರೇಕ್ ಲ್ಯಾಮ್

6. ಎರಡೂ ಇಂಡಿಕೇಟರ್ ಗಳು ಡ್ಯಾಮೇಜ್ ಆಗಿರುತ್ತದೆ.

7. ರೇರ್ ಲ್ಯಾಮ್ ಶೀಲ್ಡ್, ಗ್ರ್ಯಾಂಪ್ ಗ್ಯಾಂಡಲ್

8. ಎಡ ಭಾಗದ ಬಾಡಿ ಶೀಲ್ಡ್ ಡ್ಯಾಮೇಜ್ ಆಗಿರುತ್ತದೆ.

9. ಎರಡೂ ಕನ್ನಡಿಗಳು ಡಾಮೇಜ್ ಆಗಿರುತ್ತದೆ.

10. ಸಾರಿ ಗಾರ್ಡ ಮತ್ತು ಹಿಂಭಾಗದ ನಂಬರ್ ಪ್ಲೇಟ್ ಜಖಂ ಗೊಂಡಿರುತ್ತವೆ.

ಕೆಎ 09 ಎಎ 1670 ವಾಹನವನ್ನು ಚಾಲನೆ ಮಾಡಿ ಮತ್ತು ಕೆಎ 45 ಯು 9521 ವಾಹನವನ್ನು ಚಾಲನೆ ಮಾಡಿ ಇದ್ದ ಸ್ಥಿತಿಯಲ್ಲ ಪರಿಶೀಲಿಸಿರುತ್ತೇನೆ, ಅದರ ಬ್ರೇಕ್ ಸಿಸ್ಟಮ್ ಸರಿ ಇರುತ್ತದೆ ಮತ್ತು ಸದರಿ ಅಪಘಾತವು ಯಾವುದೆ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು

ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನಿಪಿ. 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 15(ಎ) ಎಂದು ಗುರುತಿಸಲಾಯಿತು._ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ**

ಕೆಎ 09 ಎಎ 1670 ವಾಹನಕ್ಕೆ ಯಾವುದೆ ರೀತಿಯ ಡ್ಯಾಮೇಜ್ ಆಗಿರಲಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.